**ನಮ್ಮ ಮಕ್ಕಳು ನಮ್ಮಂತಿಲ್ಲ, ಅವರಿಗೆ ವಿಧೇಯರಾಗಿರುವುದು ಗೊತ್ತಿಲ್ಲ, ಪ್ರಶ್ನಿಸುವಾಗ ದುರಹಂಕಾರಿಗಳಾಗಿರ್ತಾರೆ. ಅಪ್ಪ ಅಮ್ಮನನ್ನು ಹೀಯಾಳಿಸಲೂ ಹಿಂಜರಿಯುವುದಿಲ್ಲ. ಇವರಿಗೆ ಎಲ್ಲಿಂದ ಬಂತು ಇಷ್ಟೆಲ್ಲ ಧೈರ್ಯ? ಬೆಳೆಸುವಲ್ಲಿ ನಾವು ತಪ್ಪಿದ್ದೇವೆಯೇ? ಈ ಪ್ರಶ್ನೆ ಇಂದು ಬಹುತೇಕ ಪಾಲಕರನ್ನು ಕಾಡುತ್ತಿದೆ. ಈ ಕಾಡುವ ವರ್ತನೆಗಳಿಗೆ, ಪ್ರಶ್ನೆಗಳಿಗೆ ಪರಿಹಾರ ಇಲ್ಲಿದೆ.**



**■ ಅಕ್ಷರ ದಾಮ್ಲೆ**

‘ಅಬ್ಬಾ, ಇತ್ತೀಚೆಗಿನ ಮಕ್ಕಳನ್ನು ಸಂಭಾಳಿಸುವುದೇ ಬಹಳ ಕಷ್ಟ! ಜೆನ್ ಅಲ್ಫಾ ಮಕ್ಕಳ ದೃಷ್ಟಿಕೋನವೇ ಬೇರೆ. ಅವರ ರೀತಿ ನೀತಿಗಳೇ ಬೇರೆ. ಅವರ ಯೋಚನಾ ಲಹರಿಗಳೇ ಬೇರೆ. ಅವರಿಗೆ ನಮಗಿದ್ದ ಕುತೂಹಲಗಳಿಲ್ಲ. ನಮಗೆ ಬಾಲ್ಯದಲ್ಲಿದ್ದ ಪ್ರಶ್ನೆಗಳಿಗೂ ಈಗಿನ ಮಕ್ಕಳ ಪ್ರಶ್ನೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಅವರಿಗೆ ಅನೇಕ ವಿಷಯಗಳು ಗಣ್ಯವಾಗುವುದೇ ಇಲ್ಲ. ಉದಾಹರಣೆಗೆ ರಸ್ತೆಯಲ್ಲಿ ಹೋಗುವಾಗ ಹಿಂದಿನ ಕಾಲದಲ್ಲಿ ಮಕ್ಕಳು ವಾಹನಗಳನ್ನು ಲೆಕ್ಕ ಹಾಕುವುದರಲ್ಲೇ ಖುಷಿಪಡುತ್ತಿದ್ದುವು. ಅಥವಾ ಹೊರಗಿನ ಪ್ರಪಂಚವನ್ನು ನೋಡಿಕೊಂಡು ಹೋಗುವುದರಲ್ಲೇ ಒಂದು ಉತ್ಸುಕತೆ ಇರುತ್ತಿತ್ತು. ಆದರೆ ಈಗ ಅಂತಹ ಯಾವುದೇ ಆಸಕ್ತಿಗಳಿಲ್ಲ. ಬದಲಾಗಿ ಅವರಿಗೆ ಬೇಕಾಗಿರುವುದೇ ಬೇರೆ. ಓದುವ ವಿಚಾರದಲ್ಲೂ ಅವರಿಗೆ ಎಷ್ಟು ಬೇಕೋ ಅಷ್ಟು ಓದುತ್ತಾರೆ. ಅದಕ್ಕಿಂತ ಹೆಚ್ಚಿನ ತುಡಿತ ಇಲ್ಲ. ಮುಂದೆ ಈತ ನನ್ನನ್ನು ಮತ್ತು ನನ್ನ ಮಡದಿಯನ್ನು ನೋಡಿಕೊಳ್ಳುತ್ತಾನೋ ಎಂಬ ನಂಬಿಕೆಯೂ ಇಲ್ಲ. ತಾನಾಯ್ತು, ತನ್ನದಾಯ್ತು ಎನ್ನುವ ಕಾಲ ಬಂದಿದೆ...’ ಹೀಗೆ ಒಬ್ಬ ಪೋಷಕರು ತಮ್ಮ ಮಗನ ಕುರಿತು ತಮ್ಮದೇ ಆದಂತಹ ವ್ಯಾಖ್ಯಾನವನ್ನು ಕೊಡುತ್ತಿದ್ದರು. ಈಗಿನ ಮಕ್ಕಳು ಅಷ್ಟೊಂದು ಬದಲಾಗಿದ್ದಾರೆಯೇ? ಮತ್ತು ಅಷ್ಟೊಂದು ನಿರ್ದಯಿಗಳಾಗಿದ್ದಾರೆಯೇ? ಸಹೃದಯತೆ ಅನ್ನುವುದೇ ಇಲ್ಲವೇ? ಅಥವಾ ಮಕ್ಕಳ ಪೋಷಣೆಯ ವಿಧಾನದಲ್ಲಿ ಏನಾದರೂ ತೊಡಕುಗಳುಂಟಾಗಿವೆಯೇ? ಮತ್ತು ಅದರಿಂದಾಗಿ ಈಗಿನ ಮಕ್ಕಳು ಈ ರೀತಿ ವರ್ತಿಸುತ್ತಿದ್ದಾರೆಯೇ?

ಅವರ ಮಾತುಗಳನ್ನು ಕೇಳುತ್ತಿದ್ದಾಗ ನನ್ನ